ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ

**CC-27/2016**

**CW-66**
**PW-53**

**ಹೆಸರುಃ** ಎಂ.ವಿ ನಾಗರಾಜ.

**ತಂದೆಃ** ವೀರಪ್ಪ. .

**ವಯಸ್ಸುಃ** **58** ವರ್ಷ.

**ಕೆಲಸಃ** ವ್ಯವಸಾಯ.

**ವಾಸಃ** ಜಿಗಳಿ ಗ್ರಾಮ, ಹರಿಹರ .

**ಇಂದು ದಿನಾಂಕ:05-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಸ.ಸ ರವರಿಂದ ಅಭಿಯೊಜನೆಯವರ ಪರಃ

ಹಾಜರು ಇರುವ ಆರೋಪಿಯನ್ನು ಈ ಹಿಂದೆ ನೋಡಿದ್ದೇನೆ. ಆತನ ಪರಿಚಯ ಇದೆ. 2010 ರಲ್ಲಿ ಆರೋಪಿಗೆ ಭತ್ತ ಕೊಟ್ಟಿದ್ದೆವು, ಆತ ಶ್ರೀನಿವಾಸ ರೈಸ್ ಮಿಲ್ ನಲ್ಲಿ ಪಾಲುದಾರ ಇದ್ದನು. 248 ಚೀಲ ಭತ್ತ ಕೊಟ್ಟಿದ್ದೆನು. ಸುಮಾರು ರೂ.2,68,000/- ಸಾವಿರದ ಮೌಲ್ಯದ ಭತ್ತ ಕೊಟ್ಟಿದ್ದೆನು. ಒಂದು ತಿಂಗಳೊಳಗಾಗಿ ಭತ್ತದ ಹಣ ಕೊಡುವುದಾಗಿ ಹೇಳಿದ್ದನು. ಅದರಲ್ಲಿ ರೂ.70 ಸಾವಿರ ಮಾತ್ರಕೊಟ್ಟನು. ಉಳಿದ ಭತ್ತ ಮಾರಿದ ಹಣ 2015 ರಿಂದ ಇಲ್ಲಿಯವರೆಗೆ ಆರೋಪಿ ವಾಪಸ್ಸು ನೀಡಿಲ್ಲ. ಸುಮಾರು ರೂ.1,70,000/- ವಾಪಸ್ಸು ಕೊಡಬೇಕು. ಭತ್ತಕೊಟ್ಟ ಒಂದು ತಿಂಗಳ ನಂತರ, ನಾನು ಹಣ ಕೇಳಲು ಹೋಗಿದ್ದೆನು ಆದರೆ ಆತ ಮನೆ ಬಿಟ್ಟು ಹೋಗಿದ್ದನು. ಭತ್ತಕೊಟ್ಟ ಎಲ್ಲಾ ರೈತರು ರೈಸ್ ಮಿಲ್ ಬಳಿ ಹೋದೆವು. ಬೆಳಕೇರಿ ಗ್ರಾಮದ ಬೆಳಕೇರಪ್ಪ ಎನ್ನುವವರು ಪಿರ್ಯಾದಿಕೊಟ್ಟರು. ಬಸವರಾಜಪ್ಪ ಅಂದರೆ ಆರೋಪಿಯನ್ನು

**CW-66**

PW-53

ಠಾಣೆಗೆ ಕರೆದುಕೊಂಡು ಬಂದಾಗ ನಾನು ನನ್ನ ಹೊಲದ ಪಹಣಿ ಮತ್ತು ತೂಕ ಮಾಡಿದ ಬೇ ಬ್ರಿಡ್ಜ್ ಬಿಲ್ ನ್ನು ಕೊಟ್ಟೆನು. ನಾನು ನನ್ನ, ನನ್ನ ಅಣ್ಣನ ಹೆಸರಿನಲ್ಲಿದ್ದ 3 ಪಹಣಿಗಳು ಮತ್ತು 2 ವೇಬಿಲ್ ಗಳನ್ನು ಕೊಟ್ಟೆನು. ಸಾಕ್ಷಿಗೆ ಸಂಬಂಧಿಸಿದ ಪಹಣಿಗಳನ್ನು ಮತ್ತು ವೇಬಿಲ್ ಗಳನ್ನು ನಿ.ಪಿ-45 ರಿಂದ 49 ಎಂದು ಗುರುತಿಸಲಾಯಿತು.

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಕೇಳಿದ್ದು, ಸಕಾರಣ ಇಲ್ಲದೇ ಸಮಯಕೇಳಿದ ಕಾರಣ, ಅವರ ಮನವಿಯನ್ನು ತಿರಸ್ಕರಿಸಿ ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚುಗೆ ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**